# ಜೇಬು ಸೀರೆಯಲ್ಲಿ ಮೆರೆಯುವ ನೀರೆ



**ಸೀರೆಗಳಲ್ಲಿ ಹೊಸ ಫ್ಯಾಷನ್, ಆದೇ ಪಾಕೆಟ್ ಸೀರೆಗಳು ಸದ್ದು ಮಾಡುತ್ತಿವೆ. ಕುರ್ತಾಗಳಲ್ಲಿ ಜೇಬು ಇರುವಂತೆ ಸೀರೆಗಳಲ್ಲೂ ಜೇಬು ಹೊಲಿದು, ಫ್ಯಾಷನ್ ತಜ್ಞರು, ವಸ್ತ್ರವಿನ್ಯಾಸಗಾರರು ಮಾಡಿರುವ ಪ್ರಯೋಗ ಈಗ ಸೆಲೆಬ್ರಿಟಿಗಳಿಂದ ಹಿಡಿದು ಸಾಮಾನ್ಯ ಮಹಿಳೆಯರಿಗೂ ಪ್ರಿಯವಾಗಿದೆ.**

**■ ಆಶಾ ಎಸ್. ಕುಲಕರ್ಣಿ**

ಸೀರೆ ಎಂದರೆ ಯಾವ ಮಹಿಳೆಗೆ ಇಷ್ಟವಿಲ್ಲ ಹೇಳಿ? ಕಾಲ ಬದಲಾದಂತೆ ಎಷ್ಟೇ ಫ್ಯಾಷನಬಲ್ ಡ್ರೆಸ್‌ಗಳು ಮಾರುಕಟ್ಟೆಗೆ ಬಂದರೂ ಸೀರೆ ಎಂದಿನ ಸಾಂಪ್ರದಾಯಿಕ ಸೊಗಡಿನಿಂದ ತನ್ನ ಸ್ಥಾನಮಾನವನ್ನು ಬಿಟ್ಟುಕೊಡಲಿಲ್ಲ. ಬದಲಿಗೆ ಫ್ಯಾಷನ್‌ಗೆ ತಕ್ಕಂತೆ ನಿತ್ಯ ನೂತನವಾಗಿ ಕಂಗೊಳಿಸುತ್ತಿದೆ. ಎಷ್ಟೇ ಆಧುನಿಕ ಡ್ರೆಸ್ ತೊಡುವ ಮಹಿಳೆಯರೂ ತಮ್ಮ ವಾರ್ಡ್‌ರೋಬಿನಲ್ಲಿ ಒಂದಿಲ್ಲೊಂದು ರೇಷ್ಮೆ ಸೀರೆಯನ್ನಾದರೂ ಇಟ್ಟಿರುತ್ತಾರೆ. ಸೀರೆಗಳಲ್ಲಿನ ವೈವಿಧ್ಯಮಯ, ಬೆರಗು ಮೂಡಿಸುವಂತಹ ವಿನ್ಯಾಸ, ಅಂಚುಗಳಲ್ಲಿ ವಿಭಿನ್ನತೆ, ಸೆರಗಿನಲ್ಲಿ ಕಲಾತ್ಮಕ ನೇಯ್ಗೆ... ಹೀಗೆ ಮನಮೋಹಕ ಸೀರೆಯ ಅಂದಕ್ಕೆ ಮನಸೋಲದವರೇ ಇಲ್ಲ.

ಶುಭ ಸಮಾರಂಭ ಅಥವಾ ಯಾವುದೇ ಕಾರ್ಯಕ್ರಮಕ್ಕೆ ಹೋಗಬೇಕೆಂದರೆ, ಮಹಿಳೆಯರ ಮೊದಲ ಆಯ್ಕೆ ಟ್ರೆಡಿಷನಲ್ ಸೀರೆಗಳು. ಹೀಗಿರುವಾಗ ಸೀರೆಯಲ್ಲಿಯೇ ವಿಭಿನ್ನ ವಿನ್ಯಾಸ, ಹೊಸ ಹೊಸ ಪ್ರಯೋಗಗಳನ್ನು ಮಾಡಲು ಮುಂದಾದ ವಸ್ತ್ರವಿನ್ಯಾಸಕಾರರು ಇದೀಗ ಪಾಕೆಟ್ ಸೀರೆಗಳನ್ನು ಮಾರುಕಟ್ಟೆಗೆ ತಂದಿದ್ದಾರೆ. ಸೀರೆಗಳಿಗೂ ಪಾಕೆಟ್ ವಿನ್ಯಾಸ ಮಾಡಬಹುದಾ? ಇದರಿಂದ ಸೀರೆಯ ಅಂದ ಹಾಳಾಗುವುದಿಲ್ಲವೇ ಎಂಬ ಪ್ರಶ್ನೆ ಮೂಡುವುದು ಸಹಜ. ಹೌದು, ಸೀರೆಯ ಅಂದ ಕೆಡದಂತೆ ಸೀರೆಗೆ ವಿಶೇಷ ವಿನ್ಯಾಸ ಮಾಡಿದ ಪಾಕೆಟ್‌ಗಳನ್ನು ಅಳವಡಿಸಿ ಫ್ಯಾಷನ್ ವಿನ್ಯಾಸಗಾರರು ಮಾರುಕಟ್ಟೆಗೆ ಬಿಟ್ಟಿದ್ದಾರೆ. ಇದೀಗ ಸೋಷಿಯಲ್ ಮೀಡಿಯಾದಲ್ಲಿ ತರಹೇವಾರಿ ಪಾಕೆಟ್ ಸೀರೆಗಳದ್ದೇ ಸದ್ದು.

ಸೀರೆ ಧರಿಸುವುದೆಂದರೆ ಕೆಲವರಿಗೆ ಯುದ್ಧ ಗೆದ್ದ ಅನುಭವ. ಕೆಲವು ಮಹಿಳೆಯರು ಸರಾಗವಾಗಿ ಸೀರೆ ಉಟ್ಟರೆ, ಇನ್ನೂ ಕೆಲವರಿಗೆ ಸೀರೆ ಉಡುವುದೇ ಕಷ್ಟ. ಹಾಗೆ ಒಂದು ವೇಳೆ ಅನಿವಾರ್ಯವಾಗಿ ಸೀರೆ ಉಟ್ಟರೂ ತಮ್ಮ ಮೊಬೈಲ್, ದುಡ್ಡು ಇನ್ನಿತರ ವಸ್ತುಗಳನ್ನು ಕೊಂಡೊಯ್ಯುವುದು ಕಷ್ಟ, ಕುರ್ತಾದಲ್ಲಾದರೆ ಸೈಡ್‌ಗೆ ಒಂದು ಪಾಕೆಟ್ ಇರುತ್ತದೆ. ಆದರೆ ಸೀರೆಯಲ್ಲಿ ಪಾಕೆಟ್ ಇದ್ದರೆ ಎಷ್ಟು ಚೆನ್ನ ಎಂಬುದು ಮಹಿಳೆಯರ ಅಭಿಪ್ರಾಯವೂ ಆಗಿದೆ.

ಸೀರೆ ಧರಿಸಿದಾಗ ಅದರ ಜೊತೆ ಒಂದು ಬ್ಯಾಗ್ ಇರಲೇಬೇಕು ಎಂಬ ಮನೋಭಾವ ಮಹಿಳೆಯರದ್ದು. ಅದರಲ್ಲಿ ತಮಗೆ ಬೇಕಾದ ವಸ್ತುಗಳನ್ನು ತೆಗೆದುಕೊಂಡು ಹೋಗಬಹುದು. ಆದರೆ ಇದೀಗ ವಸ್ತ್ರವಿನ್ಯಾಸಕಾರರು ಹಲವಾರು ಮಹಿಳೆಯರ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಂಡು ಒಂದು ವಿಭಿನ್ನ ಪ್ರಯೋಗಕ್ಕೆ ಮುಂದಾಗಿದ್ದಾರೆ. ಅದುವೇ ಪಾಕೆಟ್ ಸೀರೆಗಳು. ಈಗ ಅತ್ಯಂತ ಸುಲಭವಾಗಿ ಸೀರೆಯುಟ್ಟು ತಮಗೆ ಬೇಕಾದ ವಸ್ತುಗಳನ್ನು ಸೀರೆಯ ಪಾಕೆಟ್‌ನಲ್ಲಿಟ್ಟುಕೊಂಡು ಆರಾಮವಾಗಿ ಕೈಬೀಸಿಕೊಂಡು ಹೋಗಬಹುದು.